

# ಸ್ತನ ಕ್ಯಾನ್ಸರ್‌ಗೆ ಟಾರ್ಗೆಟೆಡ್ ಥೆರಪಿ

## ನೋವಿಲ್ಲ, ಕೀಮೊ ಇಲ್ಲ!

**ಕೀಮೊಥೆರಪಿ, ರೇಡಿಯೇಷನ್ ಥೆರಪಿ ಇಲ್ಲದೆಯೂ ಸ್ತನ ಕ್ಯಾನ್ಸರ್ ಅನ್ನು ಗುಣಪಡಿಸಬಹುದು. ಪರ್ಸನಲೈಸ್ಡ್ ಟಾರ್ಗೆಟೆಡ್ ಥೆರಪಿ ಸ್ತನ ಕ್ಯಾನ್ಸರ್‌ನಿಂದ ಬಳಲುವ ಮಹಿಳೆಯರಿಗೆ ವರದಾನ.**

■ ಉಮಾ ಅನಂತ್

ಕ್ಯಾನ್ಸರ್ ಎಂದರೆ ಭಯ ಬೀಳುವವರೇ ಎಲ್ಲರೂ. ಇದಕ್ಕೆ ಕಾರಣ ಕ್ಯಾನ್ಸರ್ ಗುಣಪಡಿಸಲು ನೀಡುವ ನೋವಿನ ಇಂಜೆಕ್ಷನ್, ಕೀಮೊಥೆರಪಿ, ರೇಡಿಯೇಷನ್, ಔಷಧಿಗಳು. ಮೇಲಾಗಿ ಸ್ತನ ಕ್ಯಾನ್ಸರ್‌ನಿಂದ ಪ್ರಾಣಕ್ಕೇ ಸಂಚಕಾರ ಬಂದರೆ ಎಂಬ ಆತಂಕ, ಭಯ. ಅನೇಕ ಮಹಿಳೆಯರಿಗೆ ತಮಗೆ ಕ್ಯಾನ್ಸರ್ ಇದೆ ಎಂಬುದೇ ಗೊತ್ತಿರುವುದಿಲ್ಲ. ತಪಾಸಣೆಗಾಗಿ ಹೋದಾಗ ಕ್ಯಾನ್ಸರ್ ಪತ್ತೆಯಾದರೆ ಮಾನಸಿಕವಾಗಿ ಜರ್ಜರಿತರಾಗುತ್ತಾರೆ. ಜೀವನವೇ ಮುಗಿಯಿತು ಎಂದು ಹತಾಶೆಗೊಳಗಾಗುತ್ತಾರೆ. ಕ್ಯಾನ್ಸರ್ ಬಂದಾಗ, ಚಿಕಿತ್ಸೆ ಪಡೆಯುವಾಗ ಮತ್ತು ಗುಣಮುಖರಾದ ಮೇಲೂ ಖಿನ್ನತೆ ಅನುಭವಿಸುತ್ತಾರೆ. ಸ್ತನ ಕ್ಯಾನ್ಸರ್‌ಗೆ ಒಳಗಾದ ಮಹಿಳೆಯರು ಮುಜುಗರವನ್ನೂ ಅನುಭವಿಸುತ್ತಾರೆ. ಜೀವನದಲ್ಲಿ ಮುಂದೇನು ಎಂಬ ಆತಂಕವೂ ಅವರನ್ನು ಮನೆ ಮಾಡಿರುತ್ತದೆ.

ಮಹಿಳೆಯರಿಗೆ ಗರ್ಭಕೊರಳಿನ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಎಂದರೇ ವಿಪರೀತ ಭಯ. ಕಾರಣ ಇದರ ಚಿಕಿತ್ಸೆಯಲ್ಲಿ ನೀಡುವ ಕೀಮೊಥೆರಪಿಯ ನೋವು. ಸ್ತನ ಕ್ಯಾನ್ಸರ್ ಆಗಿದ್ದರೆ ಇದರ ಪತ್ತೆಗೆ ಮಾಡುವ ಮ್ಯಾಮೊಗ್ರಫಿ ಎಂಬ ಪರೀಕ್ಷೆ. ಇದು ಬಹಳ ನೋವಿನಿಂದ ಕೂಡಿದ್ದು ಎಂಬ ಆತಂಕ.

ಇದೀಗ ಸ್ತನ ಕ್ಯಾನ್ಸರ್ ಗುಣಪಡಿಸಲು ಅತ್ಯಾಧುನಿಕ ಚಿಕಿತ್ಸೆ ಬಂದಿದೆ. ಪರ್ಸನಲೈಸ್ಡ್ ಟಾರ್ಗೆಟೆಡ್ ಥೆರಪಿ (personalised targeted therapy) ಸ್ತನ ಕ್ಯಾನ್ಸರ್‌ನಿಂದ ಬಳಲುವ ಮಹಿಳೆಯರಿಗೆ ಒಂದು ವರದಾನ. ಕೀಮೊಥೆರಪಿಯ ನೋವು ಇಲ್ಲದೇ ಗುಣಪಡಿಸುವಂಥ ಚಿಕಿತ್ಸೆ ಇದು. ಈ ಚಿಕಿತ್ಸೆಯಿಂದ ಆರಂಭದ ಹಂತದಲ್ಲಿರುವ ಶೇ. 90ರಷ್ಟು ಸ್ತನ ಕ್ಯಾನ್ಸರ್ ರೋಗಿಗಳು ಕೀಮೊಥೆರಪಿ ಇಲ್ಲದೆಯೇ ಕಾಯಿಲೆಯನ್ನು ಗುಣಪಡಿಸಿಕೊಳ್ಳಬಹುದು.

### ಏನಿದು ಪರ್ಸನಲೈಸ್ಡ್ ಟಾರ್ಗೆಟೆಡ್ ಥೆರಪಿ?

ಸ್ತನ ಕ್ಯಾನ್ಸರ್ ಬೇರೆ ಬೇರೆ ವಿಧದಲ್ಲಿ, ಮಹಿಳೆಯರ ದೇಹ ಪ್ರಕೃತಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತದೆ. ಬೇರೆ ಬೇರೆ ಹಂತಗಳಲ್ಲಿಯೂ ಇರಬಹುದು. ರೋಗಿಯ ಕ್ಯಾನ್ಸರ್ ಪರಿಸ್ಥಿತಿ ನೋಡಿಕೊಂಡು ಈ ಥೆರಪಿ ನೀಡಲಾಗುತ್ತದೆ. ಮುಖ್ಯವಾಗಿ ಹಾರ್ಮೋನ್ ರಿಫೆಕ್ಟರ್ ಪಾಸಿಟಿವ್ ಬ್ರೆಸ್ಟ್ ಕ್ಯಾನ್ಸರ್, ಹಾಲ್ವೀವ್ ಪಾಸಿಟಿವ್ ಬ್ರೆಸ್ಟ್ ಕ್ಯಾನ್ಸರ್ ಹಾಗೂ ಟ್ರಿಪ್ಪಲ್ ನೆಗೆಟಿವ್ ಬ್ರೆಸ್ಟ್ ಕ್ಯಾನ್ಸರ್ ಎಂಬ ಮೂರು ವಿಧಗಳ ಸ್ತನ ಕ್ಯಾನ್ಸರ್‌ಗಳಿವೆ. ಹಿಂದೆ ಈ ಎಲ್ಲ ವಿಧದ ಕ್ಯಾನ್ಸರ್‌ಗಳಿಗೆ ಕೀಮೊಥೆರಪಿ, ರೇಡಿಯೇಷನ್ ಥೆರಪಿ ಕಡ್ಡಾಯವಾಗಿ ನೀಡಲಾಗುತ್ತಿತ್ತು.